vittasuggi@gmail.com
ವಿತ್ತವಾಣಿ
ಮನೆ ಮನೆಯ ಮನಿಮಾತು
ನಂ.1 ಕನ್ನಡ ದಿನಪತ್ರಿಕೆ
ವಿಜಯವಾಣಿ
ಸೋಮವಾರ 11 ಜುಲೈ 2022
» 11 JULY 2022
• VIJAYAVANI » BENGALURU
9c



ಖರ್ಜೂರ ತಂದ ಲಕ್ಷ್ಮೀಕಟಾಕ್ಷ



ಗಣ್ಯರ ಭೇಟಿ

ನೀರಾವರಿ, ಕೀಟಬಾಧೆ, ಇಳುವರಿ

■ ಎನ್.ವಿ.ವೆಂಕಟೇಶ್ ಗುಡಿಬಂಡೆ

ಚಿಕ್ಕಬಳ್ಳಾಪುರ ಎಂದಾಕ್ಷಣ ದ್ರಾಕ್ಷಿ, ತರಕಾರಿ, ಹೂವಿನ ಬೆಳೆ ನೆನಪಾಗುತ್ತದೆ. ಇದರ ನಡುವೆ ಗುಡಿಬಂಡೆ ತಾಲೂಕಿನ ರೈತರೊಬ್ಬರು ಖರ್ಜೂರ ಬೆಳೆದು ಇತರರಿಗೆ ಮಾದರಿಯಾಗಿದ್ದಾರೆ. ಗುಡಿಬಂಡೆ ತಾಲೂಕು ಹಂಪಸಂದ್ರ ಗ್ರಾಮದ ಪ್ರಗತಿಪರ ರೈತ ಲಕ್ಷ್ಮೀನಾರಾಯಣ ಜಿಲ್ಲೆಯಲ್ಲಿ ಮೊದಲ ಬಾರಿಗೆ ನೂತನ ಪ್ರಯೋಗ ನಡೆಸಿ ಯಶಸ್ಸು ಕಂಡಿದ್ದಾರೆ. 4 ಎಕರೆ ಜಮೀನಿನಲ್ಲಿ ಟೊಮ್ಯಾಟೊ ಬೆಳೆಯುತ್ತಿದ್ದ ಇವರು ಬೆಲೆ ಸಿಗದೆ, ಮಾವು, ಸಪೋಟ ತೋಟ ಮಾಡಿದ್ದರು. ಆದರಲ್ಲೂ ನಿರೀಕ್ಷಿತ ಲಾಭ ಕಾಣದೆ ನಷ್ಟ ಅನುಭವಿಸಿದ್ದರು. ಈ ನಡುವೆ ಏನಾದರೂ ನೂತನ ಪ್ರಯೋಗ ಮಾಡಬೇಕೆಂದು ಯೋಚಿಸಿ ಖರ್ಜೂರ ಬೆಳೆಯನ್ನು ಬೆಳೆದಿದ್ದಾರೆ. ಗ್ರಾಪಂ ಅಧ್ಯಕ್ಷ ರೂ ಆಗಿರುವ ಲಕ್ಷ್ಮೀನಾರಾಯಣ, ಉಷ್ಣವಲಯದಲ್ಲಿ ಬೆಳೆಯುವ ಖರ್ಜೂರ ತಳಿ ಬಗ್ಗೆ ತಮಿಳುನಾಡಿನ ವ್ಯಕ್ತಿಯೊಬ್ಬರಿಂದ ಮಾಹಿತಿ ಪಡೆದುಕೊಂಡು, ಅವರ ಮೂಲಕವೇ ಕುವೈತ್‌ನಿಂದ ಸಸಿ ತರಿಸಿ ತಮ್ಮ ಹೊಲದಲ್ಲಿ ನಾಟಿ ಮಾಡಿದ್ದಾರೆ. ನಾಲ್ಕು ಎಕರೆ ಜಾಗದಲ್ಲಿ 260 ಗಿಡಗಳಿದ್ದು, ಅದರಲ್ಲಿ ಸದ್ಯ ಕೆಲವು ಫಸಲು ಬಿಟ್ಟಿವೆ. ತೋಟದಲ್ಲೇ 1 ಕೆ.ಜಿ ಖರ್ಜೂರವನ್ನು 250 ರೂ. ಗೆ ಮಾರಾಟ ಮಾಡುತ್ತಿದ್ದಾರೆ.

ನಾಟಿ ವಿಧಾನ ಮತ್ತು ಖರ್ಚು

ಸಸಿ ನಾಟಿಗೂ ಮುನ್ನ 2 ಆಡಿ ಆಳ, 2 ಆಡಿ ಉದ್ದದ ಗುಂಡಿ ತೆಗೆದು ಅದರಲ್ಲಿ ಕೆಂಪು ಮಣ್ಣು, ಕೊಟ್ಟಿಗೆ ಗೊಬ್ಬರ ಹಾಕಿ ಭರ್ತಿ ಮಾಡಿ ಎರಡು ತಿಂಗಳು ಬಿಡಬೇಕು. ನಂತರ ಅದೇ ಗುಂಡಿಯನ್ನು ಒಂದು ಆಡಿ ತೆಗೆದು ಸಸಿ ನಾಟಿ ಮಾಡಬೇಕು. ಗಿಡದಿಂದ ಗಿಡಕ್ಕೆ 25 ಆಡಿ ಅಂತರವಿರಬೇಕು. ನಾಟಿ ಮಾಡಿದ 2 ವರ್ಷ ಅಂತರ ಬೆಳೆ ಬೆಳೆಯಬಹುದು. ನಾಟಿ ಮಾಡುವವರೆಗೆ ಪ್ರತಿ ಗಿಡಕ್ಕೆ 5 ಸಾವಿರ ರೂ. ಖರ್ಚು ಬರುತ್ತದೆ. 260 ಗಿಡಗಳಿಗೆ 13 ಲಕ್ಷ ರೂ. ಖರ್ಚು ಬಂದಿದೆ. ನಂತರ ವರ್ಷಕ್ಕೆ ಎರಡು ಬಾರಿ ಗೊಬ್ಬರ ಹಾಕಬೇಕು ಎನ್ನುತ್ತಾರೆ ಲಕ್ಷ್ಮೀ ನಾರಾಯಣ.

ಮಾಹಿತಿಗೆ: ಲಕ್ಷ್ಮೀನಾರಾಯಣ, ಮೊ.ಸಂ.-8762870327

4 ವರ್ಷಕ್ಕೆ ಫಸಲು

ಖರ್ಜೂರ ಸಸಿ ನಾಟಿ ಮಾಡಿದ ಮೂರರಿಂದ ನಾಲ್ಕು ವರ್ಷಗಳ ನಡುವೆ ಹೊಂಬಾಳೆ ಮಾದರಿಯಲ್ಲಿ ಹೂವು ಬಿಡಲು ಆರಂಭವಾಗುತ್ತದೆ. ಸಾಮಾನ್ಯವಾಗಿ ಜನವರಿಯಿಂದ ಮಾರ್ಚ್ ಮೊದಲನೇ ವಾರದವರೆಗೆ ಹಂತಹಂತವಾಗಿ ಹೂವು ಬಿಡುತ್ತದೆ. ನಂತರ ಹೊಂಬಾಳೆ ಒಡೆದು 20 ದಿನಗಳಲ್ಲಿ ಸಣ್ಣ ಸಣ್ಣ ಕಾಯಿ ಆಗುತ್ತವೆ. ಮೂರು ತಿಂಗಳಲ್ಲಿ ಕಾಯಿಗಳು ಹಸಿರು ಬಣ್ಣದೊಂದಿಗೆ ಗೋಲಿಗಾತ್ರದಷ್ಟಾಗುತ್ತವೆ. 4ನೇ ತಿಂಗಳಿಗೆ ಕಂದು ಬಣ್ಣಕ್ಕೆ ತಿರುಗಿ, ಕೇಸರಿ ಮಿಶ್ರಿತ ಕಂದು ಬಣ್ಣಕ್ಕೆ ಬಂದಾಗ ಕೊಯ್ಲು ಮಾಡಬಹುದಾಗಿದೆ. ನಾಟಿ ಮಾಡಲು ಮಳೆಗಾಲ ಉತ್ತಮ ಎನ್ನುತ್ತಾರೆ ಲಕ್ಷ್ಮೀನಾರಾಯಣ್.

ಸಜೀವ ಜೆ.ಸಿ.ಮಧುಸ್ವಾಮಿ, ಕೋಲಾರ ಶಾಸಕ ಶ್ರೀನಿವಾಸಗೌಡ, ಆಂಧ್ರ ಪ್ರದೇಶದ ಸಚಿವ ಕೃಷ್ಣಮೂರ್ತಿ, ಸ್ಥಳೀಯ ಶಾಸಕ ಎಸ್.ಎನ್.ಸುಬ್ಬಾರೆಡ್ಡಿ ಸೇರಿ ಅನೇಕ ಗಣ್ಯರು ಹಾಗೂ ಯುವ ರೈತರು ತೋಟಕ್ಕೆ ಆಗಮಿಸಿ ಬೆಳೆ ಮಾಹಿತಿ ಪಡೆಯುತ್ತಿದ್ದಾರೆ.



ಚಿಕ್ಕಬಳ್ಳಾಪುರ ಜಿಲ್ಲೆಯಲ್ಲೇ ಮೊದಲು ಖರ್ಜೂರ ಬೆಳೆದಿದ್ದೇನೆ. ಆಂಧ್ರಪ್ರದೇಶದ ವ್ಯಾಪಾರಿಗಳು ಖರೀದಿಸಲು ಬಂದಿದ್ದಾರೆ. ಸದ್ಯ ತಾಲೂಕಿನಲ್ಲಿಯೇ ಕೆ.ಜಿಗೆ 250 ರೂ.ನಂತೆ ಮಾರಾಟ ಮಾಡಲು ಯೋಚಿಸಿದ್ದೇನೆ.
| ಲಕ್ಷ್ಮೀನಾರಾಯಣ ಹಂಪಸಂದ್ರ ರೈತ

ಗಿಡಗಳಿಗೆ ಡ್ರಿಪ್ ಅಳವಡಿಸಿದ್ದು, ಬೇಸಿಗೆಯಲ್ಲಿ 2 ದಿನಕ್ಕೊಮ್ಮೆ ನೀರು ಬಿಡುತ್ತೇನೆ. ಮಳೆಗಾಲದಲ್ಲಿ ಹೆಚ್ಚು ನೀರು ಬೇಕಾಗಲ್ಲ. ಗಿಡದ ಬುಡದಲ್ಲಿ ರೈನೋಸ್ ಎಂಬ ಕೀಟ ಉತ್ಪತ್ತಿಯಾಗಿ ಗಿಡದ ಸುಳಿ ಕಚ್ಚುತ್ತದೆ. ಅದನ್ನು ಪತ್ತೆ ಹಚ್ಚಿ ಔಷಧ ಸಿಂಪಡಿಸಬೇಕು. ಸಾವಯವ ಗೊಬ್ಬರ ದೊಂದಿಗೆ ರಾಸಾಯನಿಕ (ಡಿಎಪಿ) ಗೊಬ್ಬರ ಬಳಸಿದರೆ ಪ್ರತಿ ಗಿಡಕ್ಕೆ 350ರಿಂದ 400 ಕೆಜಿ ಖರ್ಜೂರ ಬೆಳೆಯಬಹುದು. ನಮ್ಮ ತೋಟದ ಗಿಡಗಳಲ್ಲಿ 400 ಕೆ.ಜಿ. ಬೆಳೆ ಬಂದಿದೆ ಎಂದು ಲಕ್ಷ್ಮೀ ನಾರಾಯಣ ಹೇಳುತ್ತಾರೆ.

ವೆನಿಲ್ಲಾ ಹೆಚ್ಚು ವೆಚ್ಚ ಬೇಕಿಲ್ಲಾ

■ ಕಾಂತರಾಜ್ ಹೊನ್ನೇಕೋಡಿ ಸಕಲೇಶಪುರ

ಎರಡು ಗುಂಟೆ ಜಾಗದಲ್ಲಿ ಹೆಚ್ಚು ಕಷ್ಟವಿಲ್ಲದೆ ವಾರ್ಷಿಕ ಎರಡು ಲಕ್ಷ ರೂ. ಸಂಪಾದನೆ! ಹೌದು. ಇದು ಆಶ್ಚರ್ಯವಾದರೂ ಸತ್ಯ. ಇಂತಹ ಕಮಾಲ್ ಮಾಡುತ್ತಿರುವುದು ತಾಲೂಕಿನ ಬ್ಯಾಕರವಳ್ಳಿ ಗ್ರಾಮದ ಮಂಜುನಾಥ್. ಇಪ್ಪತ್ತು ವರ್ಷಗಳಿಂದ ವೆನಿಲ್ಲಾ ಬೆಳೆಯುತ್ತಿರುವ ಮಂಜುನಾಥ್, ಕೇವಲ ಎರಡು ಗುಂಟೆ ಜಮೀನಿನಲ್ಲಿ ವಾರ್ಷಿಕ ಎರಡು ಲಕ್ಷ ರೂ.ಗಳಿಗೂ ಅಧಿಕ ಸಂಪಾದನೆ ಮಾಡುತ್ತಿದ್ದಾರೆ. ಮನೆಯ ಸುತ್ತಮುತ್ತಲಿನ ಖಾಲಿ ಜಾಗ ಹಾಗೂ ಕಾಫಿ ತೋಟದ ಗಿಡಗಳ ಮಧ್ಯೆ 250 ವೆನಿಲ್ಲಾ ಬಳ್ಳಿಗಳನ್ನು ನಾಟಿ ಮಾಡಿದ್ದು, ನಾಟಿ ಮಾಡಿದ ಎರಡು ವರ್ಷದಿಂದಲೇ ಫಸಲು ಬಿಡಲು ಆರಂಭಿಸಿದ ನಿರಂತರವಾಗಿ ಯಾವುದೇ ಖರ್ಚಿಲ್ಲದೆ ಲಾಭ ಗಳಿಸುತ್ತಿದ್ದಾರೆ.



ನಿರ್ವಹಣೆ: ಬಳ್ಳಿಗಳಿಗೆ ಕೊಟ್ಟಿಗೆ ಗೊಬ್ಬರ, ಕುರಿಗೊಬ್ಬರ ಹಾಗೂ ಒಣ ಎಲೆಗಳು ಪ್ರಮುಖ ಪೋಷಕಾಂಶ. ಬೆಳೆಗಳಿಗೆ ಯಾವುದೇ ರೋಗಬಾಧೆ ಕಾಡದಿದ್ದರೂ ಮುಂಜಾಗ್ರತಾ ಕ್ರಮವಾಗಿ ವಾರ್ಷಿಕವಾಗಿ ಒಮ್ಮೆ ಮಾತ್ರ ಮೈಲುತುತ್ತು ಸುಣ್ಣ ಬೆರಸಿ ಔಷಧ ಸಿಂಪಡಣೆ ಮಾಡಿದರೆ ಬೇರೆ ಯಾವ ಖರ್ಚಿಲ್ಲ. ಬಳ್ಳಿಯ ಹೂವುಗಳಿಗೆ ಸ್ವಯಂ ಪರಾಗಸ್ಪರ್ಶ ಸಾಧ್ಯವಿಲ್ಲದ ಕಾರಣ ಕೈಯಿಂದಲೇ ಪರಾಗಸ್ಪರ್ಶ ಮಾಡಿಸುವುದೊಂದೇ ಈ ಬೆಳೆಯಲ್ಲಿ ಕಷ್ಟದ ಕೆಲಸ ಎನ್ನುತ್ತಾರೆ ಮಂಜುನಾಥ್. ಪ್ರತಿ ಬಳ್ಳಿಯಲ್ಲಿ 10 ಗ್ರಾಂನಿಂದ 3 ಕೆ.ಜಿ.ವರೆಗೆ ಇಳುವರಿ ಪಡೆಯಬಹುದಾಗಿದೆ. ಅಡಕೆ ಮರಗಳಿಗೆ ವೇಗವಾಗಿ ಹಬ್ಬುವುದರಿಂದ ಮೆಣಸಿನ ಬಳ್ಳಿಗಳಿಗೆ ಪರ್ಯಾಯವಾಗಿ ವೆನಿಲ್ಲಾ ಬೆಳೆಯಬಹುದು ಎಂಬುದು ಇವರ ಕಿವಿಮಾತು.

ಮಾರ್ಚ್‌ನಿಂದ ಮೇ ಅಂತ್ಯದವರೆಗೆ ಹೂವು ಬಿಡುವ ಬಳ್ಳಿಗಳಿಂದ ಜನವರಿಯಲ್ಲಿ ಕಾಯಿಗಳನ್ನು ಕಟಾವು ಮಾಡಬಹುದಾಗಿದೆ. ಮಾರ್ಚ್‌ನಿಂದ ಮುಂಗಾರು ಮಳೆ ಬರುವವರೆಗೆ ಹನಿ ನೀರಾವರಿ ವ್ಯವಸ್ಥೆ ಕಲ್ಪಿಸುವುದು ಉತ್ತಮ ಎಂಬ ಅಭಿಪ್ರಾಯ ಬೆಳೆಗಾರರದ್ದು. ತಮಿಳುನಾಡು, ಆಂಧ್ರಪ್ರದೇಶದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ವೆನಿಲ್ಲಾ ಬೆಳೆಯನ್ನು 8/8 ವಿಸ್ತೀರ್ಣದಲ್ಲಿ ದ್ರಾಕ್ಷಿ ಬೆಳೆಯ ಮಾದರಿಯಲ್ಲಿ ಬೆಳೆಯುತ್ತಾರೆ. ಆದರೆ, ಇಲ್ಲಿ 6/6 ಅಳತೆಯಲ್ಲಿ ನೆರಳಿನ ಮರಗಳಿಗೆ ಬಳ್ಳಿಗಳನ್ನು ಹಬ್ಬಿಸುವ ಮೂಲಕ ಬೆಳೆಯಲಾಗುತ್ತಿದೆ. ಸದ್ಯ ವೆನಿಲ್ಲಾ ಬೀನ್ಸ್ ಪ್ರತಿ ಕೆ.ಜಿ.ಗೆ 1800 ರೂ.ಗಳಿಂದ 2000 ರೂ.ವರೆಗೆ ದರ ಇದೆ. ಈ ಬಾರಿ 250 ಬಳ್ಳಿಗಳಿಂದ 110 ಕೆ.ಜಿ. ವೆನಿಲ್ಲಾ ಬೆಳೆದಿದ್ದು, 1800 ರೂ.ಗಳಂತೆ ಮನೆಗೆ ಬಂದು ಚೆನ್ನೈ ಮೂಲದ ಕಂಪನಿ ಖರೀದಿಸಿದೆ ಎನ್ನುತ್ತಾರೆ ಮಂಜುನಾಥ್.

ಬಳ್ಳಿಗಳ ಮಾರಾಟ: ಡಿಸೆಂಬರ್‌ನಲ್ಲಿ ಬಳ್ಳಿಗಳನ್ನು ಕಟಾವು ಮಾಡುವ ರೂಢಿಯಿದ್ದು, ಪ್ರತಿ ಮೀಟರ್ ಬಳ್ಳಿಯನ್ನು 60 ರೂ.ಗಳಿಂದ 80 ರೂ.ಗಳಿಗೆ ಮಾರಾಟ ಮಾಡಲಾಗುವುದು. ಸದ್ಯ ಯುವ ಬೆಳೆಗಾರರು ವೆನಿಲ್ಲಾ ಬಗ್ಗೆ ಆಸಕ್ತಿ ತೋರುತ್ತಿದ್ದು ಇತ್ತೀಚಿನ ವರ್ಷಗಳಲ್ಲಿ ಬಳ್ಳಿಗಳ ಖರೀದಿ ಹೆಚ್ಚಿದೆ ಎಂಬುದು ಅವರ ಮಾತು. ಚಾಕೋಲೇಟ್, ಐಸ್‌ಕ್ರೀಮ್, ಫೇಸ್‌ಕ್ರೀಮ್ ಸೇರಿದಂತೆ ಹತ್ತು ಹಲವು ವಸ್ತುಗಳನ್ನು ತಯಾರಿಸಲು ವೆನಿಲ್ಲಾ ಬಳಕೆ ಇದ್ದು, ಹೆಚ್ಚಿನ ಬೇಡಿಕೆ ಇರುವ ವೆನಿಲ್ಲಾ ಬೆಳೆಯನ್ನು ಕೇವಲ ಗುಂಟೆಗಳ ಜಾಗದಲ್ಲಿ ಬೆಳೆಯಬಹುದಾಗಿರುವುದರಿಂದ ಸಣ್ಣ ಕೃಷಿಕರಿಗೆ ಇದು ವರದಾನ ಎಂಬುದು ಮಂಜುನಾಥ್ ಅಭಿಪ್ರಾಯ.

ವೆನಿಲ್ಲಾ ಬೆಳೆಯ ಬಗ್ಗೆ ಆಸಕ್ತಿ ಹೊಂದಿದ್ದವರು ಮಂಜುನಾಥ್ ಅವರನ್ನು ಸಂಪರ್ಕಿಸಬಹುದು(ಮೊ.ನಂ. 9481080287).



For more information visit
University Library Website
Web - uasbagrilibindia.org
E-mail- librarian@uasbangalore.edu.in

ವಿ ರೈತ ಮಿತ್ರ

ಭತ್ತದ ಬೆಳೆಯಲ್ಲಿ ಪೋಷಕಾಂಶ ನಿರ್ವಹಣೆ ಹಾಗೂ ಗೊಬ್ಬರಗಳ ಸಮರ್ಪಕ ಬಳಕೆ ಹೇಗೆ?

| ಹರೀಶ್ ಬೆಳ್ಳೂರು, ನಾಗಮಂಗಲ ತಾಲೂಕು

ಪ್ರತಿ ಎಕರೆಗೆ ಭತ್ತ ನಾಟಿ ಮಾಡುವ 15-20 ದಿನಗಳ ಮುಂಚೆ ಹಸಿರೆಲೆ ಗೊಬ್ಬರ 2 ಟನ್ ಮತ್ತು ಕೊಟ್ಟಿಗೆ ಗೊಬ್ಬರ 4 ಟನ್ ಅನ್ನು ಮಣ್ಣಿಗೆ ಸೇರಿಸುವುದು. 800 ಗ್ರಾಂ ಅಜೋಸ್ಪೈರಿಲಂ ಜೈವಿಕ ಗೊಬ್ಬರವನ್ನು ಪ್ರತಿ ಎಕರೆಗೆ ಬೀಜೋಪಚಾರಕ್ಕೆ ಅಥವಾ ಸಸಿಗಳ ಬೇರನ್ನು ಅದ್ದಿ ನಾಟಿ ಮಾಡಲು ಉಪಯೋಗಿಸಿವುದು.

ರಸಾಯನಿಕ ಗೊಬ್ಬರಗಳು (ಕಿ.ಗ್ರಾಂ ಪ್ರತಿ ಎಕರೆಗೆ)

ಪೋಷಕಾಂಶ	ಅಧಿಕ ಇಳುವರಿ ತಳಿಗಳು		ಸಂಕರಣ ತಳಿಗಳು	
	ಮುಂಗಾರು	ಬೇಸಿಗೆ	ಮುಂಗಾರು	ಬೇಸಿಗೆ
ಸಾರಜನಕ	40	50	50	63
ರಂಜಕ	20	25	25	32
ಪೋಟ್ಯಾಷ್	20	25	20	32
ಸತುವಿನ ಸಲ್ಫೇಟ್	8	8	8	8

ಶೇ.50 ಸಾರಜನಕ, ಶೇ.50 ರಂಜಕ, ಶೇ.50 ಪೋಟ್ಯಾಷ್ ಮತ್ತು ಪೂರ್ತಿ ಪ್ರಮಾಣದ ಸತುವಿನ ಸಲ್ಫೇಟ್ ಅನ್ನು ನಾಟಿಗೆ ಮೊದಲು ಮಣ್ಣಿಗೆ ಸೇರಿಸುವುದು. ನಾಟಿಯಾದ 25-30 ದಿನಗಳಲ್ಲಿ ಶೇ.25 ಸಾರಜನಕ ಮತ್ತು ಶೇ.50 ರಂಜಕ ಗೊಬ್ಬರಗಳನ್ನು ಹಾಗೂ ಉಳಿದ ಶೇ.25 ಸಾರಜನಕ ಹಾಗೂ ಶೇ.50 ಪೋಟ್ಯಾಷ್ ಗೊಬ್ಬರಗಳನ್ನು ಗರ್ಭಾಂಕುರ ಸಮಯದಲ್ಲಿ ಅಥವಾ ತೆನೆ ಬರುವುದಕ್ಕೆ 20 ದಿನಗಳ ಮೊದಲು ಮೇಲು ಗೊಬ್ಬರವಾಗಿ ಬಳಸುವುದು ಸೂಕ್ತ.

| ಹರ್ಷಕುಮಾರ್ ಎಸ್.ಎಸ್. ಬೇಸಾಯ ತಜ್ಞರು

ನಿಂಬೆಯಲ್ಲಿ ನಾಟಿಗೆ ಸೂಕ್ತ ತಳಿಗಳು ಯಾವುವು? ನಾಟಿ ಕ್ರಮಗಳೇನು?

| ಮುನಿನಾರಾಯಣ ಬೆಂಗಳೂರು

ನಮ್ಮ ರಾಜ್ಯದಲ್ಲಿ ನಿಂಬೆ ಬೆಳೆಯನ್ನು 15,558 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ. ನಿಂಬೆಯಲ್ಲಿ ನಾಟಿಗೆ ಸೂಕ್ತ ತಳಿಗಳೆಂದರೆ ಕಾಗಜಿ ಲಿಂಬೆ, ಬಾಲಾಜಿ, ಮಾರ್ಕೆಟ್ ಲೈಮ್, ಬೀಜ ರಹಿತ ಲಿಂಬೆ, ಪ್ರಮಾಲಿನಿ, ವಿಕ್ರಮ, ಮುಂತಾದ ತಳಿಗಳು. ನಾಟಿ ಮಾಡಲು ಸೂಕ್ತ ಕಾಲವೆಂದರೆ ಜೂನ್- ಆಗಸ್ಟ್ (ಮುಂಗಾರು) ತಿಂಗಳು. ಭೂಮಿಯನ್ನು ಚೆನ್ನಾಗಿ ಉಳುಮೆ ಮಾಡಿ 15X15 ಆಡಿ ಅಥವಾ 18X18 ಆಡಿ ಅಂತರದಲ್ಲಿ 2 X 2 X2 ಆಡಿ ಗಾತ್ರದ ಗುಂಡಿ ತೆಗೆಯಬೇಕು. ಪ್ರತಿ ಗುಂಡಿಗೆ ತಳಭಾಗದಲ್ಲಿ ಮೇಲ್ಮಣ್ಣು, 15-20 ಕಿ.ಗ್ರಾಂ ಕೊಳೆತ ಕೊಟ್ಟಿಗೆ ಗೊಬ್ಬರ, 1.0 ಕಿ.ಗ್ರಾಂ ಬೇವಿನ/ಹೊಂಗೆ ಹಿಂಡಿ ಮಿಶ್ರಣವನ್ನು ಹಾಕಿ ನಂತರ ತಳ ಪದರಗಳ ಮಣ್ಣನ್ನು ಮೇಲೆ ಹರಡಿ ಚೆನ್ನಾಗಿ ಬೆಳೆದ ಕಸಿ ಮಾಡಿದ ಸಸಿಗಳನ್ನು ಪ್ರತಿ ಗುಂಡಿಗೆ ಒಂದರಂತೆ ನೆಡಬೇಕು. ನೆಟ್ಟ ನಂತರ ಬುಡದ ಸುತ್ತ ಮಣ್ಣನ್ನು ಬಿಗಿಗೊಳಿಸಿ, ಸಸಿ ಬೀಳದಂತೆ ಕೋಲನ್ನು ಆಸರೆಯಾಗಿ ನೆಡಬೇಕು.

| ಡಾ. ಶಾಲಿನಿ ಎಂ. ತೋಟಗಾರಿಕೆ ತಜ್ಞರು

ನೆಲಗಡಲೆಯಲ್ಲಿ ಬೀಜೋಪಚಾರ ಹೇಗೆ?

| ಸಂತೋಷ್ ಚಿಕ್ಕಬಳ್ಳಾಪುರ

ಬಿತ್ತನೆಗೆ ಮುಂಚೆ ನೆಲಗಡಲೆ ಬೀಜಕ್ಕೆ 2.5 ಗ್ರಾಂ ಥೈರಾಮ್ ಪುಡಿಯನ್ನು ಪ್ರತಿ ಕಿ.ಗ್ರಾಂ ಬೀಜಕ್ಕೆ ಬೆರೆಸಿ, ನೆರಳಿನಲ್ಲಿ ಒಣಗಿಸಬೇಕು. ತದನಂತರ ಒಂದು ಎಕರೆ ಬಿತ್ತನೆ ಬೀಜಕ್ಕೆ 150 ಗ್ರಾಂ ರೈಜೋಬಿಯಂ ಮತ್ತು 400 ಗ್ರಾಂ ರಂಜಕ ಕರಗಿಸುವ (ಪಿ.ಎಸ್.ಬಿ.) ಜೀವಾಣು ಜೈವಿಕ ಗೊಬ್ಬರಗಳಿಂದ ಉಪಚರಿಸಿ ಬಿತ್ತನೆಗೆ ಬಳಸಬೇಕು. ಗೊಣ್ಣೆ ಹುಳು ಅಥವಾ ಗೆದ್ದಲು ಹುಳುಗಳ ಬಾಧೆಯಿದ್ದಲ್ಲಿ, ಅವುಗಳ ಹತೋಟಿಗೆ ಪ್ರತಿ ಕಿ.ಗ್ರಾಂ ಬಿತ್ತನೆ ಬೀಜಕ್ಕೆ 15 ಮಿ.ಲೀ. ಕ್ಲೋರೋಪೈರಿಫಾಸ್ ಲೇಪಿಸಿ ಬಿತ್ತನೆ ಮಾಡುವುದು.

ಸೂಚನೆ: ರೈಜೋಬಿಯಂ ಮತ್ತು ರಂಜಕ ಕರಗಿಸುವ ಜೀವಾಣು (ಪಿ.ಎಸ್.ಬಿ.) ಬೀಜೋಪಚಾರಕ್ಕೆ ಮುಂಚೆ ಶಿಲೀಂಧ್ರನಾಶಕ ಅಥವಾ ಪೀಡೆನಾಶಕಗಳ ಬೀಜೋಪಚಾರವನ್ನು ಮಾಡುವುದು.

| ಪ್ರಿಯಾಂಕ ಬಿ. ಸಸ್ಯರೋಗ ತಜ್ಞರು

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು. ಇಲ್ಲಿನ ತಜ್ಞರು ಪ್ರತಿ ಸೋಮವಾರ ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571/ 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಿ.

ಔಷಧಿ ಗುಣದ ಕಪ್ಪು ಅಕ್ಕಿ

• ಹರಿಣಿ ಮೋಹನ್ ಕುಮಾರಿ

ಬಿಳಿ ಅಕ್ಕಿಯನ್ನು ಊಟ ಮಾಡಿ ರೂಢಿಯಾಗಿರುವ ನಮಗೆ, ಕಪ್ಪು ಅಕ್ಕಿಯನ್ನು ಕಂಡರೆ ಅಚ್ಚರಿ ಎನಿಸಬಹುದು. ನಮ್ಮ ದೇಶದ ಈಶಾನ್ಯ ಭಾಗದಲ್ಲಿ ಮತ್ತು ಇತರ ಭಾಗಗಳಲ್ಲಿ ಕಪ್ಪು ಅಕ್ಕಿಯ ತಳಿ ಇದ್ದು, ಇದರ ಹಲವು ಔಷಧೀಯ ಗುಣಗಳು ಈಚೆಗೆ ಎಲ್ಲರ ಗಮನ ಸೆಳೆದಿವೆ. ಇತ್ತೀಚಿಗೆ ಸಂಶೋಧನೆಗೆ ಒಳಗಾಗುತ್ತಿರುವ ಕಪ್ಪು ಅಕ್ಕಿ ಮುಂಚೂಣಿಯಲ್ಲಿದೆ. ಕಪ್ಪು ಅಕ್ಕಿಯು ತನ್ನ ಪೌಷ್ಟಿಕಾಂಶದ ಮೌಲ್ಯ ಹಾಗು ಆದರ ಆರೋಗ್ಯ ಪ್ರಯೋಜಕಗಳಿಂದ ಎಲ್ಲರ ಗಮನ ಸೆಳೆದಿದೆ.

ಕಪ್ಪು ಅಕ್ಕಿಯ ಹುಟ್ಟಿನ ಮೂಲ ಏಷ್ಯಾ.

ಹಲವು ಔಷಧೀಯ ಗುಣಗಳ ಆಗರ ಎನಿಸಿರುವ ಕಪ್ಪು ಅಕ್ಕಿಯನ್ನು ಅದೇ ಉದ್ದೇಶಕ್ಕೆ ಕೃಷಿ ಮಾಡಿದರೆ, ಸಾಕಷ್ಟು ಆದಾಯ ತರಬಲ್ಲದು. ಇದು ನಮ್ಮ ದೇಶದ ಹೆಮ್ಮೆಯ ಬೆಳೆ.



ಇದರ ಪೌಷ್ಟಿಕ ಮೌಲ್ಯಗಳನ್ನು ಗಮನದಲ್ಲಿರಿಸಿ ಪ್ರತ್ಯೇಕವಾಗಿ ಕಪ್ಪು ಅಕ್ಕಿಯನ್ನು ಕೇವಲ ರಾಜ ವಂಶಸ್ಥರು ಮಾತ್ರ ಉಪಯೋಗಿಸುವುದು ರೂಢಿಯಲ್ಲಿತ್ತು. ಈ ಅಕ್ಕಿಯ ತಳಿಯು ಹಲವಾರು ವಿಭಿನ್ನ ರೋಗಗಳನ್ನು ಗುಣಪಡಿಸುತ್ತದೆ ಎಂದು ನಂಬಲಾಗಿದೆ. ಈ ಅಕ್ಕಿಯು ವಿಶೇಷವಾದ ಘಮ ಮತ್ತು ವಿಭಿನ್ನ ರುಚಿಯನ್ನು ಹೊಂದಿದೆ.

ಗ್ಲೂಕೋಸ್ ಅಂಶ ನಿಯಂತ್ರಣ

ಝಿಂಕ್ಸಾಂಥಿನ್ ಮತ್ತು ಲ್ಯೂಟಿನ್ ಎಂಬ ಉತ್ಕರ್ಷಣ ನಿರೋಧಕಗಳನ್ನು ಕಪ್ಪು ಅಕ್ಕಿಯು ಹೊಂದಿರುತ್ತದೆ. ಇವು ನಮ್ಮ ಅಕ್ಷಿಪಟಗಳ ರಕ್ಷಣೆ ಮಾಡುವುದಲ್ಲದೆ ಕಣ್ಣಿನ ಆರೋಗ್ಯವನ್ನು ಸಹ ಕಾಪಾಡಲು ಸಹಕರಿಸುತ್ತದೆ.

ಇತ್ತೀಚಿನ ಅಧ್ಯಯನಗಳ ಪ್ರಕಾರ ಮೊಳಕೆಯೊಡೆದ ಕಪ್ಪು ಅಕ್ಕಿಯ ಉತ್ಪನ್ನಗಳನ್ನು 12 ವಾರ ಸೇವಿಸುವುದರಿಂದ ದೇಹದಲ್ಲಿನ ಗ್ಲುಕೋಸ್ ಅಂಶ ನಿಯಂತ್ರಣಕ್ಕೆ ಬರಬಲ್ಲದು. ಇದು ಗ್ಲುಕೋಸ್ ಸಹಿಷ್ಣುತೆಯನ್ನು ಹೆಚ್ಚಿಸುತ್ತದೆ. ದೇಹದಲ್ಲಿನ ಇನ್ಸುಲಿನ್ ಉತ್ಪಾದನೆಯನ್ನು ಅಧಿಕಗೊಳಿಸುತ್ತದೆ.

ಹೃದಯದ ಆರೋಗ್ಯ ಕಾಪಾಡುವಲ್ಲಿ ಕಪ್ಪು ಅಕ್ಕಿಗೆ ಮಹತ್ವದ ಸ್ಥಾನವಿದೆ. ಅಪಧಮನಿಯ ಬದಿಗಳಲ್ಲಿ ಸಾಂದ್ರತೆಯು ಹೆಚ್ಚಾಗಿ ಅವು ಗಟ್ಟಿಯಾಗಿ ಅಪಧಮನಿಕಾಠಿಣ್ಯವು ಉಂಟಾಗುತ್ತದೆ. ಕಪ್ಪು ಅಕ್ಕಿಯ ಸೇವನೆಯಿಂದ ಹೃದಯವು ಹಿಗ್ಗಿಸಿ ರಕ್ತನಾಳದಲ್ಲಿ ಶೇಖರಣೆಯಾದ ಲಿಪೊಪ್ರೋಟೀನ್ ಸಾಂದ್ರತೆ ಕಡಿಮೆಯಾಗುವುದಲ್ಲದೆ, ಅಪಧಮನಿ ಬದಿಯ ಕೊಲೆಸ್ಟರಾಲ್ ಕಡಿಮೆಯಾಗಿ, ರಕ್ತನಾಳದ ಗಾಯವನ್ನು ಪ್ರತಿಬಂಧಿಸಿ ಎದೆಯುರಿಯು ಸಹ ಕಡಿಮೆಗೊಳ್ಳುತ್ತದೆ.

ಕಪ್ಪು ಅಕ್ಕಿಯಲ್ಲಿ ಹೆಚ್ಚು ಫೈಬರ್ ಅಥವಾ ನಾರಿನ ಅಂಶ ವಿದ್ದು, ಇದು ಜೀರ್ಣಾಂಗದಲ್ಲಿನ ವಿಷಕಾರಿ ತ್ಯಾಜ್ಯವನ್ನು ತೆಗೆದುಹಾಕುವಲ್ಲಿ ಸಹಕಾರಿ. 100 ಗ್ರಾಂ ಅಕ್ಕಿಯಲ್ಲಿ 2.2 ಡಯಟರಿ ಫೈಬರ್ ಇದೆ. ಹೊಟ್ಟೆ ಉಬ್ಬರಿಸುವಿಕೆ, ಮಲಬದ್ಧತೆ, ಮೂಲವ್ಯಾಧಿ, ಕರುಳಿನ ಕೆರಳುವ ಲಕ್ಷಣಗಳು ಕಡಿಮೆಯಾಗುತ್ತದೆ.

ಫ್ರೀ ರಾಡಿಕಲ್ಸ್‌ವಿರುದ್ಧ ಹೋರಾಟ

ಕಪ್ಪು ಅಕ್ಕಿಯಲ್ಲಿನ ಆಂಥೋಸಿಯಾನಿನ್ ಅಂಶವು ದೇಹದಲ್ಲಿನ ಫ್ರೀ ರಾಡಿಕಲ್ಸ್ ವಿರುದ್ಧ ಹೋರಾಡುವ ಮೂಲಕ ಉಬ್ಬಸವನ್ನು ತಡೆಗಟ್ಟುತ್ತದೆ. ಇದರಲ್ಲಿರುವ ಹಲವಾರು ವಿವಿಧ ಫ್ಲ್ಯಾವೊನೊಯ್ಡ್‌ಗಳು ದೇಹದಲ್ಲಿನ ನೈಟ್ರಿಕ್ ಆಸಿಡ್ ಮಟ್ಟವನ್ನು ಕಡಿಮೆಗೊಳಿಸಿ, ರಕ್ತದ ಒತ್ತಡವನ್ನು ನಿಯಂತ್ರಿಸುತ್ತದೆ ಎಂಬುದರಲ್ಲಿ ಸಂದೇಹವಿಲ್ಲ.

ಜಪಾನ್, ಇಂಡೋನೇಷ್ಯಾ, ಥೈಲ್ಯಾಂಡ್, ಭಾರತ, ಫಿಲಿಪೈನ್ಸ್ ಮೊದಲಾದ ದೇಶಗಳಲ್ಲಿ ಕಪ್ಪು ಅಕ್ಕಿಯನ್ನು ಬೆಳೆಯುತ್ತಿದ್ದು, ನಮ್ಮ ದೇಶದಲ್ಲಿ ವರ್ಷಕ್ಕೆ ಸರಿ ಸುಮಾರು 112.91 ಟನ್ ಗಳಷ್ಟು ಕಪ್ಪು ಅಕ್ಕಿಯನ್ನು ಬೆಳೆಯಲಾಗುತ್ತಿದೆ. ಮಣಿಪುರದಲ್ಲಿ ಇದನ್ನು ಚಾಕ್‌ಹಾವೋ ಎಂದು ಕರೆಯುತ್ತಾಎ. ಮುಂದಿನ ದಿನಗಳಲ್ಲಿ ಕಪ್ಪು ಅಕ್ಕಿಯು ನಮ್ಮ ಜನರ ಆಹಾರ ಕಾಪಾಡುವ ಪ್ರಮುಖ ಧಾನ್ಯವಾಗಿ ರೂಪುಗೊಂಡರೆ ಅಚ್ಚರಿಯಿಲ್ಲ.



11-07-2022 Vsv Pg 13

11-07-2022
Vv Pg 09

ಆರ್ಥಿಕ ಸಾಧನೆಗೆ ನೈಸರ್ಗಿಕ ಕೃಷಿಯೇ ಆಧಾರ

ಗ್ರಾಮ ಪರಿವರ್ತನೆ ಸಾಧ್ಯವಿಲ್ಲ ಎಂದವರಿಗೆ ಡಿಜಿಟಲ್ ಇಂಡಿಯಾ ಯಶಸ್ಸೇ ಪ್ರತ್ಯುತ್ತರ ಎಂದ ಪಿಎಂ



ಅಹಮದಾಬಾದ್: ಭವಿಷ್ಯದಲ್ಲಿ ನೈಸರ್ಗಿಕ ಕೃಷಿ ಅಭಿಯಾನವು ಬೃಹತ್ ಪ್ರಮಾಣದಲ್ಲಿ ಯಶಸ್ಸು ಕಾಣಲಿದೆ. ಇದಕ್ಕೆ ರೈತರು ಎಷ್ಟು ಬೇಗ ಒಗ್ಗಿಕೊಳ್ಳುತ್ತಾರೆಯೋ ಅಷ್ಟು ಉತ್ತಮ ಲಾಭ ಕಾಣಲಿದ್ದಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ತಿಳಿಸಿದ್ದಾರೆ.

ಸೂರತ್‌ನಲ್ಲಿ ನಡೆದ 'ನೈಸರ್ಗಿಕ ಕೃಷಿ' ಕುರಿತಾದ ಸಮಾವೇಶವನ್ನು ಉದ್ದೇಶಿಸಿ ಆನ್‌ಲೈನ್‌ನಲ್ಲಿ ಮಾತನಾಡಿದ ಪ್ರಧಾನಿ, ''ನೈಸರ್ಗಿಕ ಕೃಷಿಯನ್ನು ಅಳವಡಿಸಿಕೊಳ್ಳುವುದು ಮಣ್ಣಿನ ಗುಣಮಟ್ಟವನ್ನು ರಕ್ಷಿಸುವುದರ ಜತೆಗೆ ಅದರ ಉತ್ಪಾದಕತೆಯನ್ನು ಹೆಚ್ಚಿಸುತ್ತದೆ. ಇದು ಆರ್ಥಿಕ ಯಶಸ್ಸಿಗೆ ಆಧಾರವೂ ಕೂಡ. ಈ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡಾಗ ನೀವು ಭೂತಾಯಿಯ ಜತೆಗೆ ಗೋಮಾತೆಯ ಸೇವೆ ಮಾಡುವ ಸೌಭಾಗ್ಯವನ್ನೂ ಪಡೆಯುತ್ತೀರಿ,'' ಎಂದು ಕಿವಿಮಾತು ಹೇಳಿದ್ದಾರೆ. ಸೂರತ್‌ನಲ್ಲಿ ಅಳವಡಿಸಿಕೊಳ್ಳಲಾಗಿರುವ ನೈಸರ್ಗಿಕ ಕೃಷಿ ಮಾದರಿಯು ದೇಶಕ್ಕೆ ಮಾದರಿಯಾಗಿದೆ. ದೇಶದ ಸುಸ್ಥಿರ ಅಭಿವೃದ್ಧಿ ಮತ್ತು ಶುದ್ಧ ಆಹಾರದ ಬಗ್ಗೆ ಜಗತ್ತನ್ನು ಮುನ್ನಡೆಸಲು ಇಂಥ ಪ್ರಕೃತಿದತ್ತವಾದ ಕೃಷಿ ಪದ್ಧತಿ ಮಾತ್ರವೇ ಅವಕಾಶವನ್ನು ನೀಡುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ನಮ್ಮ ಸರಕಾರವು ನೈಸರ್ಗಿಕ ಕೃಷಿ ಪದ್ಧತಿಯ ಉತ್ತೇಜನಕ್ಕಾಗಿ 'ಕೃಷಿ ವಿಕಾಸ್ ಯೋಜನೆ'ಯನ್ನು ಯಶಸ್ವಿಯಾಗಿ ಜಾರಿಗೆ ತಂದಿದೆ. ಈ ಯೋಜನೆಯಡಿ ಲಕ್ಷಾಂತರ ರೈತರ ಅನುಕೂಲಕ್ಕಾಗಿ ದೇಶದಾದ್ಯಂತ 30 ಸಾವಿರ ಕ್ಲಸ್ಟರ್‌ಗಳನ್ನು ರಚಿಸಲಾಗಿದೆ. ಗ್ರಾಮೀಣ ಭಾಗದಲ್ಲಿ ಸುಧಾರಣೆ ಮತ್ತು ಆಮೂಲಾಗ್ರ ಪರಿವರ್ತನೆ ಸಾಧ್ಯವಿಲ್ಲ ಎಂದು ಟೀಕಿಸಿದವರಿಗೆ ಬಿಜೆಪಿ ಆಡಳಿತದಲ್ಲಿ ಅತಿಹೆಚ್ಚು ಯಶಸ್ಸು ಕಂಡಿರುವ 'ಡಿಜಿಟಲ್ ಇಂಡಿಯಾ ಮಿಷನ್' ಪ್ರತ್ಯುತ್ತರವಾಗಿದೆ. ಪರಿವರ್ತನೆಗೆ ತಾವೇ ಮುಂದಾಳತ್ವ ವಹಿಸುತ್ತೇವೆ ಎಂದು ಈ ಮೂಲಕ ಗ್ರಾಮೀಣರು ತೋರಿಸಿಕೊಟ್ಟಿರುವುದು ಸಂತಸದ ಸಂಗತಿ ಎಂದು ಮೋದಿ ಹೇಳಿದ್ದಾರೆ.



'ಏಕ ಭಾರತ' ಸಂತರ ಸಂಕಲ್ಪ

ಸ್ವಾಮಿ ಆತ್ಮಸ್ಥಾನಂದ ಅವರ ಜನ್ಮಶತ ಮಾನೋತ್ಸವ ಹಿನ್ನೆಲೆಯಲ್ಲಿ ವಿಡಿಯೊ ಸಂದೇಶವೊಂದನ್ನು ಪೋಸ್ಟ್ ಮಾಡಿರುವ ಪ್ರಧಾನಿ ನರೇಂದ್ರ ಮೋದಿ ಅವರು, ಭಾರತದ ಸಂತ ಪರಂಪರೆಯು 'ಏಕ ಭಾರತ, ಶ್ರೇಷ್ಠ ಭಾರತ' ಎಂಬ ಮಹತ್ತರ ಪರಿಕಲ್ಪನೆಗೆ ಆಧಾರ ಹಾಗೂ ಅಗತ್ಯ ಬೆಂಬಲ ನೀಡಿದೆ. ರಾಮಕೃಷ್ಣ ಮಿಷನ್ ಸ್ಥಾಪನೆಯ ಉದ್ದೇಶ ಕೂಡ ಇದೇ ಆಗಿದೆ ಎಂದು ತಿಳಿಸಿದ್ದಾರೆ. ಸ್ವಹಿತಾಸಕ್ತಿಗಳನ್ನು ತೊರೆದು ಸಮಾಜಕ್ಕಾಗಿ ಶ್ರಮಿಸುವುದು 'ಸನ್ಯಾಸ'ದ ನೈಜ ಅರ್ಥ. ಇದಕ್ಕೆ ಪುಷ್ಟಿ ತುಂಬಿದವರು ಸ್ವಾಮಿ ವಿವೇಕಾನಂದರು, ಅವರು ಸನ್ಯಾಸಕ್ಕೆ ಆಧುನಿಕ ಸ್ಪರ್ಶ ನೀಡಿ ವಾಸ್ತವ ಜೀವನಕ್ಕೆ ಆಧ್ಯಾತ್ಮವನ್ನು ಹತ್ತಿರವಾಗಿಸಿದರು ಎಂದು ಪ್ರಧಾನಿ ವಿವರಿಸಿದ್ದಾರೆ.

11-07-2022 Vk Pg 06

MNREGA incentive to up dragon fruit farming

TIMES NEWS NETWORK

Mysuru: Considered good for diabetic patients, low in calories, and high in nutrients like iron, calcium, potassium, and zinc, the horticulture department has initiated measures to promote cultivation of dragon fruit under the MNREGA scheme in Mysuru district.

The initiative comes in the wake of the Centre urging states to increase the area under cultivation of the 'super fruit', which is highly touted for its health benefits and nutritional values.

In the past, the horticulture department had promoted cultivation of various fruit-bearing crops like banana, papaya, avocado and coconut besides others, by funding material and labour costs for growers.

The department is now encouraging farmers in semi-arid areas to cultivate dragon fruit, also known as a desert crop, since it needs very little water to grow. Since the plant is a creeper like grape, farmers must construct cement or rock



pillars in their fields. About 300 to 400 pillars are needed per acre.

Officials say three or four saplings can be planted per pillar and it will yield fruit within a year. Each plant will provide a yield for 20 years. Farmers can expect four to five quintals of fruit per acre in the initial years, which will increase as the plant grows.

Currently, shopping malls are buying these fruits and grading, packing, and selling them to customers at prices between Rs 300 to Rs 450 per kg, an official said. The department will also help farmers market the fruits.

Dr BT Rudresh, deputy director of horticulture, said demand for the fruit is robust both in the domestic and international markets and it will help farmers enhance their income. "The department will provide Rs 45,000 to take up cultivation in one hectare of land. This will cover nursery costs and help farmers procure seeds and saplings," he said.

But Attahalli Devaraj, vice-president, Karnataka State Farmers Federation, said: "Since the cost of production of this crop is initially high, the government must increase the material component cost so that even small and marginal farmers, who have only a few cents of land, can take up cultivation."

11-07-2022
Times of Ind Pg 05

Sown area of paddy rises marginally

Centre asks States to encourage farmers to increase cultivation citing the global demand for grain

SPECIAL CORRESPONDENT
NEW DELHI

The area sown with paddy rose marginally from that of the previous week, but was 23.95% less than in the corresponding period of last year, according to data collected by the Crop Division of the Union Agriculture Ministry till July 8.

The difference in the area coverage from the 2021 figure is 22.75 lakh hectares. Sowing of pulses such as black gram and yellow split pigeon pea has decreased, while the cultivation of green gram (*moong dal*) has increased by 37.47% and other pulses by 135.12%.

The Ministry has been maintaining that it is too early to suggest a decrease in paddy cultivation in the States during this kharif season.



Steep fall: The difference in the area coverage from the 2021 figure is 22.75 lakh hectares. ▪ AM FARUQUI

Farmers' organisations, on the other hand, have been claiming that scarcity of water and fertilizers is forcing farmers to reduce the sowing of paddy.

Till July 1, the decrease in area was about 27%.

Chhattisgarh showed a decrease of about 6.1 lakh hectares, while the area in Punjab is down by 4.8 lakh hectares. In Madhya Pradesh, there has been a decrease by 4.6 lakh hectares.

Madhya Pradesh showed the most decrease – by 22.4 lakh hectares – in the sowing of all kharif crops, while Rajasthan increased cultivation by about 25 lakh hectares till July 8.

Oilseed cultivation

On total oilseeds too, the decrease in cultivation is more than 20%.

Groundnut and soyabean cultivation is down by 18.95% and 21.74%, respectively.

Farmers seem to have preferred to sow sunflower during this kharif season as its cultivation has increased by about 43%, though the acreage is just about 1.16 lakh hectares.

Among coarse cereals, Bajra has shown an increase of about 79.26%, while the cultivation of jowar, ragi, maize and small millets have significantly reduced as compared to last year's cultivation.

The Centre has been asking the States to encourage farmers to cultivate paddy, citing the global demand for the foodgrain. It has been pushing for nutrition security by asking farmers to raise coarse cereals.

The increasing prices of edible oils due to import dependence had given tough moments for the Centre recently.

11-07-2022 Hindu Pg 10